ಕಡೂರು ಡಿಸ್ಟ್ರಿಕ್ಟು.

ತಾರೀಖು 10ನೇ ಏಪ್ರೆಲ್ 1887.

ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ರ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತಾವೇಜುಗಳನ್ನು ಕ್ರಮಪ್ರಕಾರ ವಾರಸ್ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುಕ್ತಾರೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ಜಂಬರ್ ನಂಬರ್.	ದಸ್ತಾವೇಜಿನ ನಂಬರ್ ಮತ್ತು ಸಬ್ ರಿಜಿಸ್ಟ್ರಾರ್ ಆಫೀಸ್ ಹೆಸರು.	ದಸ್ತಾವೇಜು ಬರಸಿಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜುಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರೇಷನ್ ಖರ್ಚಿಗೆ ಬೇಕಾದ ಹಣ ಕಟ್ಟಿದ ತಾರೀಖು.	ರಿಜಿಸ್ಟ್ರೇಷನ್ ಮಾಡಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	Iನೇ ಬುಕ್ಕು ನಂ. 250—1884—85 ಚಿಕ್ಕಮಗಳೂರು ಸಬ್ ರಿಜಿಸ್ಟ್ರಾರ್.	ದುಂಗೆರೆಯಲ್ಲಿರುವ ಬಲಿಜ ಜಾತಿ ಸುಬ್ಬಪ್ಪೆಟ್ಟರ ಮಗ ಶಿವಾಚಾರ ಜಾತಿ ಸುಬ್ಬಪ್ಪೆಟ್ಟ.	ದುಂಗೆರೆಯಲ್ಲಿರುವ ಮರಿಯಪ್ಪೆಟ್ಟಿ ಮಗ ಶಿವಾಚಾರ ಜಾತಿ ಒಸಸವಿ.	1ನೇ ಡಿಸಂಬರ್ 1885ನೇ ಇಸವಿ.	1ನೇ ಡಿಸಂಬರ್ 1885ನೇ ಇಸವಿ.	ಕಡೂರು ಸಬ್ಜಡ್ಜ್ ಕೋರ್ಟು 1883ನೇ ಇಸವಿ ಅಮಲ್ಜಾರಿ ನಂಬರ್ 163ನೇ ಮೊಕದ್ದಮಾದಲ್ಲಿ ಪ್ರತಿವಾದಿಗಳಿಂದ ತನಿಗೆ ಬರಬೇಕಾದ 1,250 ರೂಪಾಯಿನ ಡಿಕ್ರೀಯನ್ನು ತನ್ನಿಂದ ಬರಸಿಕೊಂಡವನಿಗೆ ಸಲ್ಲಬೇಕಾದ 400 ರೂಪಾಯಿಗೆ ಸದರಿ ಡಿಕ್ರಿಯನ್ನು ಕ್ರಯಕ್ಕೆ ಕೊಟ್ಟು ಇರುವದಾಗಿ.
2	Iನೇ ಬುಕ್ಕು ನಂ. 350—1884—85 ಡಿಟೋ	ಹುಯಿಗೆರೆಯಲ್ಲಿರುವ ಲಿಂಗೆಗೌಡನ ಮಗ ವಕ್ಕಲಿ ಮಕ್ಕಳ ಜಾತಿ ಸುಬ್ಬೇಗೌಡ.	ಕೊಪ್ಪ ತಾ|| ಗುತ್ತೀರ್ಕಾಯ್ ಯೂರೋಪಿಯನ್ ಕಾಫಿ-ಪ್ಲಾಂಟರ್ ಹರಬರ್ಟ್ ವಾರ್ಕ್ ಸ್ಟ್ಯಾಕಲ್ಯಾಂಡ್ ಸಾಹೇಬರು.	18ನೇ ಮಾರ್ಚಿ 1885.	18ನೇ ಮಾರ್ಚಿ 1885.	200 ರೂಪಾಯಿಗಳಿಗೆ ಹುಯಿಗೆರೆ ಗ್ರಾಮದಲ್ಲಿರುವ ನಂ. 43ನೇ ಕೂರಮ್ಮನ ವೊಡವೆ ಯೆಂಬ ತೋಟ ಪುಧ್ಧ ಕ್ರಯಕ್ಕೆ ಕೊಟ್ಟಿರುವದಾಗಿ.
3	IVನೇ ಬುಕ್ಕು ನಂ. 14—1884—85 ಡಿಟೋ	ಮಲ್ಲಿಗಾರನಲ್ಲಿರುವ ವೀರೇಗೌಡನ ಮಗ ಶಿವಾಚಾರ ಜಾತಿ ಮುತ್ತೇಗೌಡ.	ಮಂಡ್ಯದಲ್ಲಿರುವ ಹಾಲಿ ಮಲಗಾರಲ್ಲಿರುವ ಕಿಷ್ಣಯ್ಯ ಸಂಪತ್ತು ಕೊಮಾರೈಯ್ಯಂಗಾರ್ರ ಮಕ್ಕಳು ಶ್ರೀವೈಷ್ಣವ ಬ್ರಾಹ್ಮಣ ನರಸಿಹ್ಮಯ್ಯಂಗಾರ್.	2ನೇ ಮಾರ್ಚಿ 1885.	2ನೇ ಮಾರ್ಚಿ 1885.	ಬರಸಿಕೊಂಡವರಿಗೆ ತಾನು ಕೊಡಬೇಕಾದ 50 ರೂಪಾಯಿಗಳಿಗೆ ಶೇಕಡಾ 1 ದರ ತಿಂಗಳು 1ಕ್ಕೆ 8 ಆಣೆ ವೇರಿಗೆ ಬಡ್ಡಿ ಕೇರಿಸಿ 1886ನೇ ಇಸವಿ ಮಾರ್ಚಿ ಆಖೈರ್ ವಳಗೆ ಅಸಲ್ ಬಡ್ಡಿ ಸಹ ಪಾವತಿಮಾಡುವದಾಗಿಯೂ ವಾಯಿದೆಗೆ ಸರಿಯಾಗಿ ಪಾವತಿ ಮಾಡದಿದ್ದರೆ ಶೇಕಡಾ 1ಕ್ಕೆ ತಿಂಗಳು 1ಕ್ಕೆ 1 ರೂಪಾಯಿ ಪ್ರಕಾರ ಹಣ ಪಾವತಿ ತಾರೀಖುವರಿಗೆ ಬಡ್ಡಿ ಕೇರಿಸಿ ಅಸಲ್ ಬಡ್ಡಿ ಸಹ ಕೊಡುವಂತೆ.

ತಾರೀಖು 5ನೇ ಏಪ್ರೆಲ್ 1887.

ಕಡೂರು ಡಿಸ್ಟ್ರಿಕ್ಟು ಯಡೆಹಳ್ಳಿ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತಾವೇಜನ್ನು ಕ್ರಮಪ್ರಕಾರ ವಾರಸ್ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುಕ್ತಾರೀಕರಾಗಲೀ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರೆ ನಾಶಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್‌ಮತ್ತು ಸಬ್ ರಿಜಿಸ್ಟ್ರಾರ್ ಆಫೀಸ್ ಹೆಸರು.	ದಸ್ತಾವೇಜು ಬರದು ಕೊಟ್ಟವರ ಹೆಸರುಮತ್ತು ವಾಸಸ್ಥಳ.	ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಸ್ಟರ್ ಬಗ್ಗೆ ಹಾಜರ್ಮಾಡಿದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1ನೇ ಬುಕ್ಕು 11ನೇ ಸಂಪುಟ ನಂಬರ್ 35 1884—85 ಯಡೇಹಳ್ಳಿ ಸಬ್ ರಿಜಿಸ್ಟ್ರಾರ್	ಕೊಪ್ಪ ತಾಲ್ಲೂಕು ಮುಡಬೂರ ಮಾಗಣಿ ಚಬ್ಬೆಗ್ರಾಮದಲ್ಲಿ ಇರುವ ಕಾಳೇಗೌಡನ ಮಗ ತಮ್ಮಯ್ಯಗೌಡ.	ತೀರ್ಥಹಳ್ಳಿ ತಾಲ್ಲೂಕು ಮಾಳೂರು ಮಾಗಣಿ ಕುದೂರು ಗ್ರಾಮದಲ್ಲಿರುವ ಶೇಷಯ್ಯಗೌಡರ ಮಗ ಮಾನಪ್ಪಗೌಡರಿಗೆ	29ನೇ ಜನವರೀ 1885ನೇ ಇಸವಿ	29ನೇ ಜನವರೀ 1885ನೇ ಇಸವಿ	ಚಬ್ಬೆನಾಡುಗ್ರಾಮದಲ್ಲಿರತಕ್ಕ ಸ್ವತ್ತುಗಳು. 1 ಖಾನೆಷುಮಾರಿ ನಂಬರ್ 111ನೇ ತಃ ಖ್ತು ಪೋಷ ಹಾಕಿದ ಹಂಚಿನ ಮನೆ 1ಕ್ಕೆ 13 ಅಂಕಣದ ಬಾಬತು. 2. ಸರ್ವೆ ನಂಬರ್ 169ನೇ ಕಾಫೀ ತೋಟ ಯಕರೆ 1–20 ಆಕಾರ 0–12–0 3. ಸರ್ವೆ ನಂ. 170ನೇ ಬಾಗಾಯತು ಯಕರೆ 3–37 ಆಕಾರ 24–0–0 4. ಸರ್ವೇ ನಂ. 172ನೇ ಪೈಕಿ ತರೀ ಯಕರೆ 8–4 ಆಕಾರ 23–4–0. 5. ಸರ್ವೆ ನಂ. 201ನೇ ತರೀ ಯಕರೆ 5–2 ಆಕಾರ 14–0–0 6. ಸರ್ವೆ ನಂ. 191ನೇ ಖುಷ್ಕಿ ಯಕರೆ 14–4 ಆಕಾರ 5–8–0 ಕುಟುಂಬ ಸಂರಕ್ಷಣೆಗೋಸ್ಕರ ನಡಿಸಿದ ಲೇವಾದೇವಿ ಬಾಬತು 400 ರೂಪಾಯಿ ಸಲ್ಲಶೇಕಾದ್ದಕ್ಕೆ 4 ವರುಷ ಕಂತಿನಿಂದ ಕೊಡುವದಾಗಿಯೂ ಇದಕ್ಕೆ ಮೇಲ್ಕಂಡ ಸೊತ್ತುಗಳು ಡೀಡು ಮಾಡಿರುವದಾಗಿ ಒರ ಕೊಟ್ಟ ಪತ್ರ.

ಜಿ. ಎಫ್. ಮೈಕಲ್ಜರ್ಜ್,
ರಿಜಿಸ್ಟ್ರಾರ್.

ಮೈಸೂರು ರೆವಿನ್ಯೂ ಸರ್ವೆ ಸೆಟ್ಲಮೆಂಟ್ ಇಲಾಖ್ಹಾ.

ಇ ಸ್ತಿ ಹಾ ರ್ ನಾ ಮೆ.

ನಂಬರ್ 53. ತಾರೀಖು 15ನೇ ಏಪ್ರೆಲ್ 1887.

ಇಜರಿಂದ ಸಕಲಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಕೋಲಾರ ಡಿಸ್ಟ್ರಿಕ್ಟು ಮುಳಬಾಗಲು ತಾಲ್ಲೂಕಿನ ಸರ್ವೆ ಜವಾಬಂದಿ ಫೈನಲಾತಿಯು, ಇದೇ ತಿಂಗಳ 22ನೇ ತಾರೀಖಿಗೆ, ಯಾ, ಆ ಪುಮಾರಿಗೆ ಪ್ರಾರಂಭಿಸಲ್ಪಡುತ್ತೆ.

ಜೆ. ಪಿ. ಗ್ರಾಂಟ್,
ಸೂ|| ರಿವಿನ್ಯೂ ಸರ್ವೆ ಮತ್ತು
ಸೆಟಿಲ್‌ಮೆಂಟ್ ಮೈಸೂರು.

ಗವರ್ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ದರ್ಮಾರ್ಥವಾಗಿ ಗವರ್ಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಟೆಂಡೆಂಟರ ದೆಶೆಯಿಂದ ಇದರಷ್ಟಿ ಕಂಡ ದರಗಳ ಪ್ರಕಾರ ನಗದು ಕೊಟ್ಟು